	ಅಕ್ಕಿ	ಗೋದಿ
	(ಕ್ವಿಂಟಾಳುಗಳಲ್ಲಿ)	
ಹಸಿರುಕಾರ್ಡು	2270-00	570-00
ಕೇಸರಿ ಕಾರ್ಡು	890-00	300-00
ಸಕ್ಕರೆ	679-00	-
ಸೀಮೆಎಣ್ಣೆ	264 ಕೆ.ಎಲ್.	

ಅ) ಹಳದಿ ಕಾರ್ಡು ಯೋಜನೆ ಇಲಾಖೆಯಲ್ಲಿ ಇಲ್ಲ ಆದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಅಕ್ರಮ ಮದ್ಯ ಸಾಗಾಣಿಕೆ.

936(1067) ಶ್ರೀ ಹೆಚ್.ಡಿ. ಬಸವರಾಜ್ (ವೀರಾಜಪೇಟೆ) :— ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೇರಳ ರಾಜ್ಯದಲ್ಲಿರುವ ಮಾಹೆ ಕೇಂದ್ರಾಡಳಿತ ಪ್ರದೇಶದಿಂದ ಕೊಡಗಿಗೆ ಅಕ್ರಮವಾಗಿ ಮದ್ಯವನ್ನು ಸಾಗಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸರ್ಕಾರ ಅಕ್ರಮ ಮದ್ಯ ಸಾಗಾಣಿಕೆಯನ್ನು ತಡೆಯಲು ಕೈಗೊಂಡಿರುವ ಕ್ರಮವೇನು.

ಆ) ಈದ 3 ವರ್ಷಗಳಲ್ಲಿ ವೀರಾಜಪೇಟೆ ತಾಲ್ಲೂಕಿನಲ್ಲಿ ಅಬಕಾರಿ ಇಲಾಖೆ ಅಕ್ರಮವಾಗಿ ಮದ್ಯ ಸಾರಾಯಿ ಮೆಮಾಟು ನಡೆಸುವವರ ವಿರುದ್ಧ ಕೈಗೊಂಡ ಕ್ರಮಗಳು(ವಿವರ ನೀಡುವುದು)

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :—

ಅ) ಬಂದಿರುವುದಿಲ್ಲ.

ಆದರೆ ಅಕ್ರಮ ಮದ್ಯ ಸಾಗಾಣಿಕೆಯನ್ನು ತಡೆಯಲು ಮುಂಜಾಗ್ರತಾ ಕ್ರಮವಾಗಿ ವೀರಾಜಪೇಟೆ ತಾಲ್ಲೂಕಿನ ಪೆರಂವಾಡಿ ಎಂಬಲ್ಲಿ 1998 ರಿಂದ ತನಿಖಾ ಠಾಣೆಯನ್ನು ತೆರೆಯಲಾಗಿದೆ.

ಆ) ಅಕ್ರಮ ಮದ್ಯ ವ್ಯವಹಾರ ನಡೆಸಿದ್ದರ ಮೇಲೆ ದಾಳಿಗಳನ್ನು ನಡೆಸಿ, ಅಬಕಾರಿ ಕಾಯ್ದೆ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ. ವಿವರಗಳು ಈ ರೀತಿ ಇವೆ:-

	96-97	97-98	98-99 (28-9-99)
1) ದಾಳಿಗಳ ಸಂಖ್ಯೆ	575	650	434
2) ದಾಖಲು ಮಾಡಿದ ಮೊಕದ್ದಮೆಗಳ ಸಂಖ್ಯೆ	91	98	73
3) ಅಪರಾಧಿಗಳ ಸಂಖ್ಯೆ	85	99	82
4) ವಶಪಡಿಸಿಕೊಂಡ ವಾಹನಗಳು	1	7	-
5) ವಶಪಡಿಸಿಕೊಂಡ ಮದ್ಯ	ಲೀ. 260 020	ಲೀ. 2020. 780	ಲೀ. 2155 620
6) ವಶಪಡಿಸಿಕೊಂಡ ಸಾರಾಯಿ	244.600	953.400	158.600

ವಕ್ಫ್‌ಗೆ ಸೇರಿದ ಆಸ್ತಿಯ ಕಟ್ಟಡಗಳ ನಿರ್ಮಾಣ ಮಾಡಿ ಹಂಚಿಕೆಯಲ್ಲಿ ಅವ್ಯವಹಾರ.

937(1068) ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) :— ಮಾನ್ಯ ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ವಿರಾಜಪೇಟೆ ತಾಲ್ಲೂಕಿನಲ್ಲಿ ವಕ್ಫ್‌ಗೆ ಸೇರಿದ ಆಸ್ತಿಯಲ್ಲಿ ಕಟ್ಟಡಗಳನ್ನು ನಿರ್ಮಾಣ ಮಾಡಿ ಅವುಗಳ ಹಂಚಿಕೆಯಲ್ಲಿ ಹಣದ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. ಹಾಗಿದ್ದಲ್ಲಿ, ಅದರಲ್ಲಿ ಶಾಮೀಲಾಗಿರುವವರು ಯಾರು ಯಾರು? ಸರ್ಕಾರದ ವಕ್ಫ್ ಆಸ್ತಿ ರಕ್ಷಣೆಗಾಗಿ ಕೈಗೊಳ್ಳಲಿರುವ ಕ್ರಮಗಳೇನು?

3. ವಿರಾಜಪೇಟೆ ನಗರದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಬಳಿಯಿರುವ ಆಸ್ತಿಯನ್ನು ಕೆಲವರು ಅತಿಕ್ರಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

4. ಹಾಗಿದ್ದಲ್ಲಿ ಇದನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ವಕ್ಫ್ ರಾಜ್ಯ ಸಚಿವರು) :—

1. ಇಲ್ಲ

2. ಉದ್ಭವಿಸುವುದಿಲ್ಲ

3. ಇದರಲ್ಲಿ ಒತ್ತುವರಿ ಯಾವುದು ಇಲ್ಲ, ಅದರೂ ಸಹ ವಿರಾಜಪೇಟೆಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಬಳಿ ಮಸ್ಜೀದ್-ಎ-ಅಜಮ್‌ಗೆ ಸೇರಿದ ಜಮೀನಿನಲ್ಲಿ 0.54 ಸೆಂಟ್ಸ್ ವಿಸ್ತೀರ್ಣದ ಜಮೀನಾಗಿರುತ್ತದೆ. ಈ ಜಮೀನಿನಲ್ಲಿ 2 ವಾಸದ ಮನೆಗಳು ಮತ್ತು 3 ಅಂಗಡಿಗಳು ಭಾಗಶಃ ಜಮೀನಿನಲ್ಲಿ ಕಟ್ಟಿರುತ್ತವೆ. ಸದರಿ ಅಂಗಡಿ ಮತ್ತು ಮನೆಗಳು ಮಸ್ಜೀದ್-ಎ-ಅಜಮ್ ಆಡಳಿತದಲ್ಲಿ (ವ್ಯವಸ್ಥೆಯಲ್ಲಿ) ಬಾಡಿಗೆಗೆ ಕೊಡಲಾಗಿದೆ.

4. ಉದ್ಭವಿಸುವುದಿಲ್ಲ.